**<u>ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಹರಪನಹಳ್ಳಿ</u>** .

ಸಿ ಸಿ ನಂಃ 178/2016

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಸಾಕ್ಷಿದಾರರ ಹೆಸರು : ಹನುಮಂತಪ್ಪ

ತಂದೆಯ ಹೆಸರು : ಕನ್ನಪ್ಪ

ವಯಸ್ಸು : 55 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 13.07.2023

ಉದ್ಯೋಗ : ಎ ಎಸ್ ಐ

ವಾಸ ಸ್ಥಳ : ಹರಪನಹಳ್ಳಿ

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ -</u>**

ದಿನಾಂಕ 23.10.2019 ರಿಂದ 06.06.2022 ರವರೆಗೆ ಚಿಗಟೇರಿ ಪೋಲೀಸ ಠಾಣೆ ಯಲ್ಲಿ ಎ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 03.03.2021 ರಂದು ಹಿರೇಸಿಂದೋಗಿ ಗ್ರಾಮದ ಬಸ್ಸ ನಿಲ್ದಾಣದ ಬಳಿ ಆರೋಪಿತರ ವಿಚಾರಣೆ ಸಂಬಂಧ ಮಹಜರ ಮಾಡುವಾಗ ಸದರಿ ಗ್ರಾಮದ ಜನರಾದ ಚಿನ್ನಪ್ಪ ತಂದೆ ಪಕ್ಕೀರಪ್ಪ, ಪಕ್ಕೀರಪ್ಪ ತಂದೆ ಭರ್ಮಪ್ಪ ಇವರು ಹಂದ್ರಾಳ ಗ್ರಾಮದಲ್ಲಿ ಆರೋಪಿತರ ವಿಚಾರಣೆ ಸಂಬಂಧ ಹಿರೇಸಿಂದೋಗಿ ಗ್ರಾಮದಲ್ಲಿ ಮಹಜರ ಮಾಡಿರುತ್ತೇನೆ. ಮಹಜರ ಮಾಡಿದ ಸ್ಥಳದ ಚೆಕ್ ಬಂದಿ ಪೂರ್ವ ದಿಕ್ಕಿನಲ್ಲಿ ಗ್ರಾಮದ ಜನರು ವಾಸಿಸುವ ಮನೆಗಳು, ಪಶ್ಚಿಮಕ್ಕೆ ಮುಂಡರಗಿ ಕೊಪ್ಪಳ ರಸ್ತೆ, ಉತ್ತರಕ್ಕೆ ಗ್ರಾಮದ ಒಳಗಡೆ ಬರುವ ರಸ್ತೆ, ದಕ್ಷಿಣಕ್ಕೆ ನ್ಯೂ ಬೆಂಗಳೂರು ಬೇಕರಿ ಇರುತ್ತದೆ. ಸದರಿ ಸ್ಥಳದ ಪಂಚನಮೆಯನ್ನು ಸಮಯ ಮಧ್ಯಾಹ್ನ 1.30 ರಿಂದ 2.15 ವರೆಗೆ ಸ್ಥಳ ಪಂಚನಾಮೆಯನ್ನು ಬರೆದಿರುತ್ತೇನೆ. ನಂತರ ದಿನಾಂಕ 02.03.2021 ರಂದು ಗ್ರಾಮ ಪಂಚಾಯುತಿ ಅಭಿವೃದ್ಧಿ ಅಧಿಕಾರಿಗಳು ಕೊಪ್ಪಳ ಜಿಲ್ಲೆಯಲ್ಲಿ ಆರೋಪಿತರು ಆ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಮತ್ತು ಸ್ದಿರ ಆಸ್ತಿಯನ್ನು ಹೊಂದಿರುವ ಬಗ್ಗೆ ಮಾಹಿತಿಯನ್ನು ನೀಡಲು ಮನವಿ ಪತ್ರವನ್ನು ಕೋರಿರುತ್ತೇನೆ. ನಂತರ ಗ್ರಾಮ ಪಂಚಾಂದುತಿ ಕಾರ್ಯಲಯ ಹಿರೇಸಿಂದೋಗಿ ನಾನು ನೀಡಿದ ಮನವಿ ಪತ್ರಕ್ಕೆ ಪ್ರತ್ಯುತ್ತರವಾಗಿ ದಿನಾಂಕ

ಸಿ ಸಿ ನಂಃ 178/2016

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

03.03.2021 ರಂದು ಗ್ರಾಮ ಪಂಚಾಯತಿ ಕಾರ್ಯಲಯ ಹಿರೇಸಿಂದೋಗಿ ರವರು ನಮ್ಮ ಗ್ರಾಮದ ವ್ಯಾಪ್ತಿಯಲ್ಲಿ ಯಾವುದೇ ಸ್ದೀರ ಆಸ್ತಿಗಳ ದಾಖಲೆಗಳು ಇರುವುದಿಲ್ಲ ಎಂದು ದೃಢಿಕರಿಸಿ ದೃಢಿಕರಣ ಪತ್ರ ನೀಡಿರುತ್ತಾರೆ. ಅದೇ ದಿನ ಪಂಚಾಕ್ಷರಿ ತಂದೆ ಭೀಮಶಂಕರ ರವರು ಆರೋಪಿಯು ಈ ಊರಿನಲ್ಲಿ ವಾಸವಾಗಿರುವುದಿಲ್ಲ ಎಂದು ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ಸಾಕ್ಷಿಯಾದ ಶ್ರೀ ಮಲ್ಲಪ್ಪ ತಂದೆ ರಾಮಪ್ಪ ಇವರು ಸಹ ಆರೋಪಿಗಳು ಗ್ರಾಮದಲ್ಲಿ ಇರುವುದಿಲ್ಲ ಎಂದು ಹೇಳಿಕೆ ನೀಡಿರುತ್ತಾರೆ. ಅದೇ ದಿನ ತಹಶೀಲ್ದಾರ ಹಾಗೂ ತಾಲೂಕು ದಂಡಾಧಿಕಾರಿಗಳು ಕೊಪ್ಪಳ ತಾಲೂಕು ಕೊಪ್ಪಳ ಜಿಲ್ಲೆಯವರು ಆರೋಪಿತರಿಗೆ ಸಂಬಂಧಿಸಿದಂತೆ ತಮ್ಮ ವ್ಯಾಪ್ತಿಯಲ್ಲಿ ಅವರು ಹೊಂದಿದ ಸ್ದಿರಾ ಆಸ್ತಿಯ ಬಗ್ಗೆ, ಗುರುತಿನ ಚೀಟಿಯ ಬಗ್ಗೆ ಹಾಗೂ ವಿಳಾಸದ ಬಗ್ಗೆ ಮಾಹಿತಿಯನ್ನು ನೀಡಲು ನಾನು ಮನವಿ ಪತ್ರವನ್ನು ಕೊಟ್ಟಿರುತ್ತೇನೆ. ಅದೇ ದಿನ ಪೋಲೀಸ ಪ್ರಕಟಣೆಗಳ ಪ್ರತಿಗಳನ್ನು ಸಿಂದೋಗಿ, ಹಂದ್ರಾಳ್ ಗ್ರಾಮದಲ್ಲಿ ಸಾರ್ವಜನಿಕರಿಗೆ ಹಂಚಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ತೆಗೆದ ಪೋಟೋವನ್ನು ಸಹ ನೀಡಿರುತ್ತೇನೆ. ಪ್ರೊಕ್ಲಮೇಶನ್ ಮಾಡಿದ ನಂತರ ವರದಿಯನ್ನು ಠಾಣಾ ಪಿ ಎಸ್ ಐ ರವರಿಗೆ ನೀಡಿರುತ್ತೇನೆ. ಆ ದಿನ ಸ್ಥಳದಲ್ಲಿ ಮಾಡಿದ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗ ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ನಾನು ಪಂಚಾಯತಿ ಅಭ್ಿವೃದ್ಧಿ ಅಧಿಕಾರಿಗೆ ನೀಡಿದ ಮನವಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿ ಪಿ 2 (ಎ) ಎಂದು ಗುರುತಿಸಲಾಯಿತು. ಹಿರೇ ಸಿಂದೋಗಿ ಗ್ರಾಮ

ಸಿ ಸಿ ನಂಃ 178/2016

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಪಂಚಾಯತಿ ಕಾರ್ಯಲಯರವರು ನೀಡಿದ ಹಿಂಬರಹವನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 3 ಎಂದು, ಸಾಕ್ಷಿ ಸಹಿಯನ್ನು ನಿ ಪಿ 3 (ಎ) ಎಂದು ಗುರುತಿಸಲಾಯಿತು. ಅದೇ ದಿನ ನಾನು ತಹಶೀಲ್ದಾರ ಮತ್ತು ತಾಲೂಕು ದಂಡಾಧಿಕಾರಿಗೆ ನೀಡಿದ ಮನವಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 4 ಎಂದು, ಸಾಕ್ಷಿ ಸಹಿಯನ್ನು ನಿ ಪಿ 4 (ಎ) ಎಂದು ಗುರುತಿಸಲಾಯಿತು.

**ಆರೋಪಿತರು ತಲೆಮರೆಸಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ